ರಹಮತ್ ತರೀಕೆರೆ

# ‘ಜೀವನದಲ್ಲಿ ಸಾರ್ಥಕತೆ ಕಂಡಿದ್ದೇ ಚಿತ್ರಕಲೆಯಿಂದ

## ಲೇಖಕ ಚಂದ್ರಕಾಂತ ಕುಸನೂರ ಸಂದರ್ಶನ

ನವ್ಯ ಕಾಲಘಟ್ಟದ ಲೇಖಕರಲ್ಲಿ ಒಬ್ಬರಾದ ಚಂದ್ರಕಾಂತ ಕುಸನೂರ (1931) ಅವರು, ಕತೆ ಕಾದಂಬರಿ ಕವಿತೆ ನಾಟಕ ಪ್ರಕಾರಗಳಲ್ಲಿ ಸಾಹಿತ್ಯ ರಚಿಸಿದವರು; ಕನ್ನಡ, ಉರ್ದು, ಮರಾಠಿ, ಹಿಂದಿ ಭಾಷೆಗಳಲ್ಲಿ ಬರೆಯುವ ಬಹುಭಾಷಿಕ ಲೇಖಕರು. ಗುಲ್ಬರ್ಗ ಸೀಮೆಯ ಕುಸನೂರಿನವರಾದ ಇವರು, ತಮ್ಮ ಶಿಕ್ಷಣವನ್ನು ಉರ್ದು ಮಾಧ್ಯಮದಲ್ಲಿ ಪಡೆದರು; ಬೇಂದ್ರೆ ಹಾಗೂ ಶಾಂತರಸರ ಪ್ರೇರಣೆಯಿಂದ ಕನ್ನಡದಲ್ಲಿ ಬರೆಯಲು ಆರಂಭಿಸಿದರು. ‘ಚರ್ಚ್‌ಗೇಟ್’, ‘ಒಂದು ಕೈಫಿಯತ’, ‘ಕೆರೂರ ನಾಮಾ’ (ಕಾದಂಬರಿ), ‘ತುಕಪ್ಪಾ ಮಾಸ್ತರ’ (ಕಥಾಸಂಕಲನ) ‘ನಂದಿಕೋಲು’ (ಕವನ ಸಂಕಲನ) ‘ಸುಂದರ ಕಾಂಡ ಮತ್ತು ಪ್ರತಿರೂಪ’, ‘ಸುರೇಖಾ ಮ್ಯಾಡಂ’ ‘ತೋಳ ಬಂತು ತೋಳ’ (ನಾಟಕ), ‘ಸಾಹಿತ್ಯ ಮತ್ತು ಚಿತ್ರಕಲೆ’, ‘ಕಲೆ ಮತ್ತು ಕಲಾಸಂಭವ’ (ಚಿಂತನೆ)-ಇವರ ಕೃತಿಗಳು. ಕುಸನೂರರು ಅಸಂಗತ ನಾಟಕ ಹಾಗೂ ಹಾಯಕುಗಳನ್ನು ಕನ್ನಡಕ್ಕೆ ಪರಿಚಯಿಸಿದವರು. ಅಮೂರ್ತ ಚಿತ್ರಕಲೆಯಲ್ಲೂ ಕೆಲಸ ಮಾಡಿದವರು. ಶಿಕ್ಷಕ ತರಬೇತಿ ಸಂಸ್ಥೆಯಲ್ಲಿ ಅಧ್ಯಾಪಕರಾಗಿ, ಕನ್ನಡ ಸಂಸ್ಕೃತಿ ಇಲಾಖೆಯಲ್ಲಿ ಅಧಿಕಾರಿಯಾಗಿ ನಿವೃತ್ತರಾಗಿರುವ ಇವರಿಗೆ ಈಗ 88 ವರ್ಷ. ಈ ಸಂದರ್ಶನವನ್ನು ಬೆಳಗಾವಿಯ ಅವರ ಮನೆಯಲ್ಲಿ ಮಾಡಲಾಯಿತು.